ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಶೈಶಾ-1/ಎನ್.ಎಸ್.ಕ್ಯೂ.ಎಫ್/2018-2019 ದಿನಾಂಕ-18 .07.2018

# ಜ್ಞಾಪನ

ವಿಷಯ: 2018-2019ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಮುಂದುವರೆದ ಮಾರ್ಗಸೂಚಿ -2

ಉಲ್ಲೇಖ:-1. ನಿರ್ದೇಶಕರು(ಕಾರ್ಯಕ್ರಮ) ಎಸ್.ಎಸ್.ಎ ಮತ್ತು ಆರ್.ಎಂ.ಎಸ್ ಎ ರಾ.ಮಾ.ಶಿ.ಅ ಇವರ ಜ್ಞಾಪನ ಪತ್ರಸಂಖ್ಯೆ:ಎನ್.ಎಸ್.ಕ್ಯೂ.ಎಫ್.07/18-19 ದಿನಾಂಕ:- 19.06.2018

2. ನಿರ್ದೇಶಕರು(ಕಾರ್ಯಕ್ರಮ) ಎಸ್.ಎಸ್.ಎ ಮತ್ತು ಆರ್.ಎಂ.ಎಸ್ ಎ ರಾ.ಮಾ.ಶಿ.ಅ ಇವರ ಜ್ಞಾಪನ ಪತ್ರಸಂಖ್ಯೆ:ಎನ್.ಎಸ್.ಕ್ಯೂ.ಎಫ್.07/18-19 ದಿನಾಂಕ:- 09.07.2018

2. ಈ ಕಛೇರಿಯ ಪತ್ರ ಸಂಖ್ಯೆ ಸಂಖ್ಯೆ:ಪಿಯುಸಿ/ಶೈಶಾ-01/ಎನ್.ಎಸ್.ಕ್ಯೂ.ಎಫ್/02/2018-19 ದಿನಾಂಕ-25.06.2018

--------

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು 2018-2019ನೇ ಸಾಲಿನಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡುವ ಸಂಬಂಧ ಉಲ್ಲೇಖ 02 ರ ಪತ್ರದಲ್ಲಿ ಪದವಿ ಪೂರ್ವ ಕಾಲೇಜು ಹಂತದಲ್ಲಿ ಮಾಹೆವಾರು ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. ಅದರಂತೆ ಕ್ರಮವಹಿಸಲು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎನ್.ಎಸ್.ಕ್ಯೂ.ಎಫ್ ಅನುಷ್ಠಾನಿತ ಕಾಲೇಜುಗಳಿಗೆ ಸೂಚಿಸಲು ತಿಳಿಸಿದೆ.

ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಅಡಕದಲ್ಲಿರುವ ಉಲ್ಲೇಖ 02 ರ ಪತ್ರವನ್ನು ಅವಗಾಹಿಸಲು ಕೋರಿದೆ.

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, -ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎನ್ಎಸ್ಕ್ಯೂಎಫ್ ಕಾಲೇಜುಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡಲು ಸೂಚಿಸಿದೆ.
2. ನಿರ್ದೇಶಕರ ಆಪ್ತಶಾಖೆ-ಮಾಹಿತಿಗಾಗಿ
3. ಇ-ಆಡಳಿತ-ಅಂತರ್‌ಜಾಲದಲ್ಲಿ ಅಳವಡಿಸಲು.

ಸಮಗ್ರ ಶಿಕ್ಷಣ ಅಭಿಯಾನ- ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ
ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-560001.

Skill India

ಸಂಖ್ಯೆ:ಎನ್.ಎಸ್.ಕ್ಯೂ.ಎಫ್.07/2018-19 ದಿನಾಂಕ:09-07-2018

## ಸುತ್ತೋಲೆ

ವಿಷಯ: ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ಬಗ್ಗೆ ಮಾರ್ಗಸೂಚಿ-3.

ಉಲ್ಲೇಖ: ಈ ಕಛೇರಿಯ ಜ್ಞಾಪನದ ಸಮ ಸಂಖ್ಯೆಯ ದಿನಾಂಕ:02-06-2018 ಮತ್ತು 19-06-2018.

ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು 2018-19ನೇ ಸಾಲಿನಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡುವ ಸಂಬಂಧ ಉಲ್ಲೇಖಿತ (01) ರ ಪತ್ರಗಳಲ್ಲಿ ತಿಳಿಸಲಾಗಿತ್ತು. ಮುಂದುವರೆದಂತೆ 2018-19ನೇ ಸಾಲಿನಲ್ಲಿ ಶಾಲಾ / ಕಾಲೇಜು ಹಂತದಲ್ಲಿ ಮಾಹೆವಾರು ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

**I. <u>ಶಾಲಾ ಶೈಕ್ಷಣಿಕ ಕಾರ್ಯಗಳು - ಎನ್.ಎಸ್.ಕ್ಯೂ.ಎಫ್ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರ ಕಾರ್ಯಗಳು:</u>**

i. ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ತರಗತಿಗಳನ್ನು ಒಳಗೊಂಡಂತೆ ಶಾಲಾ / ಕಾಲೇಜುಗಳಲ್ಲಿ ಸಮಗ್ರ ವೇಳಾ ಪಟ್ಟಿಯನ್ನು (Integrated school / college time table) 09 ರಿಂದ 12ನೇ ತರಗತಿಯವರೆಗೆ ರಚಿಸುವುದು. ಆದಷ್ಟು ತರಬೇತುದಾರರಿಗೆ 09 ರಿಂದ 12ನೇ ತರಗತಿಯವರೆಗೆ ಶಾಲಾ ಅವಧಿಯಲ್ಲಿಯೇ ತರಗತಿಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತಾ ಯಾವುದೇ ತರಗತಿಗಳು overlap ಆಗದಂತೆ ಎಚ್ಚರಿಕೆ ವಹಿಸುವುದು. ಶಾಲೆ ಮತ್ತು ಕಾಲೇಜು ಎರಡು ಕಡೆ ತರಬೇತುದಾರರು ಕಾರ್ಯನಿರ್ವಹಿಸಬೇಕಾಗಿರುವುದರಿಂದ ಎರಡು ವಿಭಾಗಗಳಲ್ಲಿ ಸಾಮ್ಯತೆ ತರುವ ಉದ್ದೇಶದಿಂದ ಸಮಂಜಸ ರೀತಿಯಲ್ಲಿ ನಡೆಯುವಂತೆ ವೇಳಾಪಟ್ಟಿಯನ್ನು ಸಿದ್ದಪಡಿಸುವುದು.

ii. ಒಂದೇ ತರಗತಿಯಲ್ಲಿ ಒಂದಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಎನ್.ಎಸ್.ಕ್ಯೂ.ಎಫ್ ವಿಷಯ ಬೋಧನೆಗಾಗಿ ಎಲ್ಲಾ ತರಗತಿಗಳಲ್ಲಿಯೂ ಸಾಧ್ಯವಾದಷ್ಟು ಏಕ ಕಾಲಕ್ಕೆ ಎನ್.ಎಸ್.ಕ್ಯೂ.ಎಫ್ ವಿಷಯ ಬೋಧನೆಗಾಗಿ ಅನುವು ಮಾಡಿಕೊಡುವುದು.

iii. ಎನ್.ಎಸ್.ಕ್ಯೂ.ಎಫ್ ವಿಷಯ ತರಬೇತುದಾರರನ್ನು ಎನ್.ಎಸ್.ಕ್ಯೂ.ಎಫ್ ವಿಷಯ ಬೋಧನೆ / ಕಾರ್ಯಗಳಿಗೆ ಹೊರತುಪಡಿಸಿ ಬೇರೆ ಯಾವುದೇ ವಿಷಯಗಳ ಬೋಧನಾ ಕಾರ್ಯಕ್ಕೆ ನಿಯೋಜಿಸದೆ ಇರುವುದು ಸೂಕ್ತವಾಗಿರುತ್ತದೆ.

II. ಎನ್.ಎಸ್.ಕ್ಯೂ.ಎಫ್ ಯೋಜನೆಗೆ ಸಂಬಂಧಪಟ್ಟ ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ ಈ ಕೆಳಕಂಡಂತೆ ನಿರ್ವಹಿಸುವುದು.

i. ಎನ್.ಎಸ್.ಕ್ಯೂ.ಎಫ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಆರ್ಥಿಕ ನಿರ್ವಹಣೆಯ ದಾಖಲೆಗಳು / ಕಡತಗಳು (Financial records) ಹಾಗೂ ದಾಸ್ತಾನು ವಹಿ (NSQF Stock register) ದಾಖಲೆಗಳನ್ನು ಪದವಿ ಪೂರ್ವ ಕಾಲೇಜು ವಿಭಾಗದ ಪ್ರಾಂಶುಪಾಲರ ರಕ್ಷಣೆಯಲ್ಲಿರಿಸತಕ್ಕದ್ದು (Custodian of records).

ii. ಪ್ರೌಢಶಾಲಾ ವಿಭಾಗದಲ್ಲಿ 2014-15ನೇ ಸಾಲಿನಿಂದ 2017-18ನೇ ಸಾಲಿನವರಗೆ ನಿರ್ವಹಣೆ ಮಾಡಿರುವ ಎನ್.ಎಸ್.ಕ್ಯೂ.ಎಫ್ ಯೋಜನೆಯ ನಗದು ಪುಸ್ತಕ, ಪಾಸ್ ಪುಸ್ತಕ, ಚೆಕ್ ಪುಸ್ತಕ, ಓಚರ್‌ಗಳು ಮತ್ತು ಎನ್.ಎಸ್.ಕ್ಯೂ.ಎಫ್ ಯೋಜನೆಯ ದಾಸ್ತಾನು ವಹಿ ಪದವಿ ಪೂರ್ವ ಕಾಲೇಜು ವಿಭಾಗದ ಪ್ರಾಂಶುಪಾಲರಿಗೆ ವಹಿಸತಕ್ಕದ್ದು. 2018-19ನೇ ಸಾಲಿನಿಂದ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜಿನ ಮುಖ್ಯಸ್ಥರು ಜಂಟಿಯಾಗಿ ಈ ಹಿಂದೆ ನಿರ್ವಹಣೆಯಾಗಿದ್ದ ಪುಸ್ತಕಗಳಲ್ಲಿಯೇ ಮುಂದುವರೆಸಿ ನಿರ್ವಹಿಸತಕ್ಕದ್ದು.

iii. 2014-15ನೇ ಸಾಲಿನಿಂದ 2017-18ನೇ ಸಾಲಿನವರೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಿರ್ವಹಣೆಯಾಗಿರುವ 09 ಮತ್ತು 10ನೇ ತರಗತಿಯ ದಾಖಲೆಗಳನ್ನು ಉಪಪ್ರಾಂಶುಪಾಲರ ಹಾಗೂ 11 ಮತ್ತು 12ನೇ ತರಗತಿಯ ದಾಖಲೆಗಳನ್ನು ಪ್ರಾಂಶುಪಾಲರ ರಕ್ಷಣೆಯಲ್ಲಿರಿಸತಕ್ಕದ್ದು ಹಾಗೂ 2018-19ನೇ ಸಾಲಿನಿಂದ ನಿರ್ವಹಣೆಯಾಗುವ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ದಾಖಲೆಗಳನ್ನು ಆಯಾ ವಿಭಾಗದಲ್ಲಿಯೇ ನಿರ್ವಹಿಸತಕ್ಕದ್ದು.

iv. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಂಬಂಧಿತ ವಿದ್ಯಾರ್ಥಿಗಳ ಮಾಹಿತಿಯನ್ನು ಉಭಯ ಮುಖ್ಯಸ್ಥರು ಸಂಬಂಧಿಸಿದ ಇಲಾಖೆಗಳಿಗೆ ಸಲ್ಲಿಸತಕ್ಕದ್ದು.

III. ವೃತ್ತಿ ಕೌಶಲ್ಯ ಸಂಯೋಜಕರು (Vocational Coordinator)

2018-19ನೇ ಸಾಲಿನಿಂದ ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ರಾಜ್ಯ ಕಛೇರಿಯ ಹಂತದಲ್ಲಿ ಪ್ರತಿ ಸೆಕ್ಟಾರ್‌ಗೆ ಒಬ್ಬರು ವೃತ್ತಿ ಕೌಶಲ್ಯ ಸಂಯೋಜಕರನ್ನು ನೇಮಕ ಮಾಡಲಾಗಿದೆ. ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಮಗ್ರ ಶಿಕ್ಷಣ ಅಭಿಯಾನದಲ್ಲಿ ಸದರಿ ಸಂಯೋಜಕರ ಕೇಂದ್ರ ಕಾರ್ಯ ಸ್ಥಾನವಾಗಿರುತ್ತದೆ. ಸದರಿ Vocational Coordinator ಶಾಲೆಗಳಿಗೆ ಭೇಟಿ ನೀಡಿದ ಸಮಯದಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಗೆ

ಸಂಬಂಧಪಟ್ಟಂತೆ ಆರ್ಥಿಕ ನಿರ್ವಹಣೆ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಸಂಪೂರ್ಣ ಪರಿಶೀಲನೆ ಮಾಡಿ ಈ ಕಛೇರಿಗೆ ವರದಿ ಮಾಡುವುದು ಇವರ ಆದ್ಯ ಕರ್ತವ್ಯವಾಗಿರುತ್ತದೆ. ಈ ಸಂಬಂಧ ಎನ್.ಎಸ್.ಕ್ಯೂ.ಎಫ್ ಅನುಷ್ಠಾನಿತ ಶಾಲೆ / ಕಾಲೇಜುಗಳ ಪ್ರಾಂಶುಪಾಲರು / ಉಪಪ್ರಾಂಶುಪಾಲರು ಹಾಗೂ ತರಬೇತುದಾರರು ಶಾಲೆಗೆ ಭೇಟಿ ನೀಡಿದಂತಹ Vocational Coordinator ರವರಿಗೆ ಅಗತ್ಯ ದಾಖಲೆ / ಮಾಹಿತಿಗಳನ್ನು ಪರಿಶೀಲನೆಗೆ ಒದಗಿಸಿ ಸಹಕರಿಸುವುದು ಕಡ್ಡಾಯವಾಗಿರುತ್ತದೆ.

## IV. SATS & PMS ತಂತ್ರಾಂಶದಲ್ಲಿ NSQF ಯೋಜನೆಯ ಮಾಹಿತಿಗಳನ್ನು ಅಳವಡಿಸುವುದು:

2018-19ನೇ ಸಾಲಿನಿಂದ ಎನ್.ಎಸ್.ಕ್ಯೂ.ಎಫ್ ಯೋಜನೆಗೆ ಸಂಬಂಧಿಸಿದಂತೆ 09 ರಿಂದ 12ನೇ ತರಗತಿಯವರೆಗೆ ವಿದ್ಯಾರ್ಥಿಗಳ ಮಾಹಿತಿ, ತರಬೇತುದಾರರ ಮಾಹಿತಿ, ವೃತ್ತಿ ಕೌಶಲ್ಯ ಸಂಯೋಜಕರು ಶಾಲೆಗೆ ಭೇಟಿ ನೀಡಿದ ಮಾಹಿತಿ, ಘಟಕ / ಮಧ್ಯಂತರ / ವಾರ್ಷಿಕ ಪರೀಕ್ಷೆ ವಿವರಗಳು (Unit test / Mid term / Annual exam marks), ಶಾಲಾ ಮತ್ತು ಸಂಬಂಧಪಟ್ಟ ಉದ್ಯಮದೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದ ಮಾಹಿತಿ (MOU with school & relevant industry), ಕ್ಷೇತ್ರ ಸಂದರ್ಶನ (Field Visit), ಅತಿಥಿ ಉಪನ್ಯಾಸ (Guest Lecture), Internship & Placement ವಿವರಗಳನ್ನು SATS & PMS ಎರಡು ತಂತ್ರಾಂಶದಲ್ಲಿ ಕಾಲಕಾಲಕ್ಕೆ ಕಡ್ಡಾಯವಾಗಿ ಅಳವಡಿಸುವುದು.

ನಿರ್ದೇಶಕರು (ಕಾರ್ಯಕ್ರಮ)
ಸ.ಶಿ.ಅ, ಬೆಂಗಳೂರು

ಪ್ರತಿಯನ್ನು:

1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುತ್ತಾ ಎನ್.ಎಸ್.ಕ್ಯೂ.ಎಫ್ ಅನುಷ್ಠಾನಿತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ ಜಿಲ್ಲಾ ಉಪನಿರ್ದೇಶಕರಿಗೆ ಅಗತ್ಯ ಸೂಚನೆ ನೀಡಲು ಕೋರಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
3. ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಆರ್.ಎಂ.ಎಸ್.ಎ ಇವರಿಗೆ ಸಲ್ಲಿಸುತ್ತಾ ನಿಮ್ಮ ಜಿಲ್ಲಾ ವ್ಯಾಪ್ತಿಯ ಶಾಲೆಗಳಿಗೆ ಅಗತ್ಯ ಸೂಚನೆ ನೀಡಲು ಸೂಚಿಸಿದೆ.
4. ವೃತ್ತಿ ಕೌಶಲ್ಯ ಅನುಷ್ಠಾನ ಮಾಡುತ್ತಿರುವ 100 ಶಾಲೆ / ಕಾಲೇಜುಗಳ ಪ್ರಾಂಶುಪಾಲರು ಹಾಗೂ ಉಪಪ್ರಾಂಶುಪಾಲರಿಗೆ ಸಲ್ಲಿಸುತ್ತಾ ಮೇಲ್ಕಂಡ ಆದೇಶದಂತೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.
5. ಎಲ್ಲಾ ಸೆಕ್ಟಾರ್‌ಗಳ ವೃತ್ತಿ ಕೌಶಲ್ಯ ಸಂಯೋಜಕರಿಗೆ (Vocational coordinators) ಅನುಪಾಲನೆ ಹಾಗೂ ಮುಂದಿನ ಕ್ರಮಕ್ಕಾಗಿ.
6. M/s Quess Corp Limited, 3/3/2, Bellandur Gate, Sarjapur Road, Bengaluru – 560103
7. M/s Don Bosco Tech, BREADS, 75 North Road, Bengaluru – 560 084
8. M/s LAQSDH job skills academy pvt ltd, Bangalore.

ಪತ್ರ ಸಂಖ್ಯೆ:ಎನ್.ಎಸ್.ಕ್ಯೂ.ಎಫ್.07/2018-19 ದಿನಾಂಕ:09-07-2018 ಕ್ಕೆ ಅನುಬಂಧ

## SCHEDULE OF ACTIVITIES TO BE CONDUCTED IN A YEAR FOR LEVEL-1 TO LEVEL-4 FOR THE YEAR 2018-19

| Level | June | July | Aug | Sep | Oct | Nov | Dec | Jan | Feb | Mar |
|---|---|---|---|---|---|---|---|---|---|---|
| 1 | MOU | Guest lecture-1 | Field visit-1 | Guest lecture-2 | Classes | Guest lecture-3 | Field visit-2 | Practical Exams | Guest lecture-4 | Theory Exams |
| 2 | MOU | Guest lecture-1 | Field visit-1 | Guest lecture-2 | Classes | Guest lecture-3 | Field visit-2 | Practical Exams | Guest lecture-4 | Theory Exams |
| 3 | MOU | Guest lecture-1 | Field visit-1 | Guest lecture-2 | Internship | Guest lecture-3 | Field visit-2 | Practical Exams | Guest lecture-4 | Theory Exams |
| 4 | MOU | Guest lecture-1 | Field visit-1 | Guest lecture-2 | Classes | Guest lecture-3 | Field visit-2 | Practical Exams | Guest lecture-4 | Theory Exams Placements |